17. ವಿಧಾನ ಸಭೆಯ ಐದನೇ ಅಧಿವೇಶನದಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

****

ಮಾನ್ಯ ಅಧ್ಯಕ್ಷರೆ,

ಹದಿನೈದನೇ ವಿಧಾನಸಭೆಯ ಐದನೇ ಅಧಿವೇಶನವು ದಿನಾಂಕ 25ನೇ ಜನವರಿ, 2007 ರಿಂದ ದಿನಾಂಕ 21ನೇ ಫೆಬ್ರವರಿ, 2007ರವರೆಗೆ ಹಾಗೂ ದಿನಾಂಕ 14.03.2007 ರಿಂದ ದಿನಾಂಕ 13.04.2007ರ ವರೆಗೆ ಸಮಾವೇಶಗೊಂಡು, ಒಟ್ಟು 34 ದಿನಗಳಲ್ಲಿ 154 ಗಂಟೆಗಳ ಕಾಲ ಸರ್ಕಾರಿ ಹಾಗೂ ಖಾಸಗಿ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಸದರಿ ಅಧಿವೇಶನದಲ್ಲಿ ಇತ್ತೀಚೆಗೆ ನಿಧನ ಹೊಂದಿದ ವಿಧಾನ ಸಭೆಯ ಮಾಜಿ ಸಚಿವರಾಗಿದ್ದ ಶ್ರೀ ವೈ. ರಾಮಚಂದ್ರ, ಶ್ರೀ ಡಿ. ನಾರಾಯಣದಾಸ್ ಹಾಗೂ ಶ್ರೀ ಎಂ.ಎಲ್. ಉಸ್ತಾದ್ ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಬಳವಂತರಾವ್ ದೇವರಾವ್ ಪಟೇಲ್, ಶ್ರೀ ಎಂ. ಬಸಪ್ಪ, ಶ್ರೀ ಮಂಜಪ್ಪ ಉಳ್ಳಾಲ್, ಶ್ರೀ ಡಿ. ಹಲಗೇಗೌಡ ಹಾಗೂ ಶ್ರೀ ಪಿ.ಎಸ್. ರೆಡ್ಡಿ ಮತ್ತು ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಯು.ಟಿ. ಫರೀದ್, ಪರಮ ಪೂಜ್ಯ ರಾಜನಹಳ್ಳಿ ವಾಲ್ಮೀಕಿ ಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಪುಣ್ಯಾನಂದಪುರಿ ಸ್ವಾಮಿಗಳು, ಕನ್ನಡ ಸಾಹಿತ್ಯ ಕ್ಷೇತ್ರದ ಶ್ರೇಷ್ಠ ಕವಿ ಶ್ರೀ ಪೂರ್ಣಚಂದ್ರ ತೇಜಸ್ವಿ, ಮಾಜಿ ಸದಸ್ಯರಾದ ಶ್ರೀ ಗೋಪಾಲರಾವ್ ಮುಡಬಿ ಅವರುಗಳು ನಿಧನರಾದ ಬಗ್ಗೆ ಸದನದಲ್ಲಿ ಸಂತಾಪ ನಿರ್ಣಯವನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಭಾರತ ಸಂವಿಧಾನದ 174ನೇ ಅನುಚ್ಛೇದದ (1)ನೇ ಖಂಡದಲ್ಲಿ ವಿಧಾಯಕವಾಗಿರುವಂತೆ ದಿನಾಂಕ 25.01.2007 ರಂದು ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಭಾಷಣ ಮಾಡಿದ್ದು, ವಂದನಾ ನಿರ್ಣಯವನ್ನು ಅಂಗೀಕರಿಸಲಾಗಿದೆ.

ದಿನಾಂಕ 16.3.2007ರಂದು ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು 2007–08ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಿದ್ದು ಈ ಬಗ್ಗೆ ಒಟ್ಟು ಐದು ದಿನಗಳ ಕಾಲ ಸಾಮಾನ್ಯ ಚರ್ಚೆಯನ್ನು ನಡೆಸಿ ಸಾಲ್ಕು ತಿಂಗಳ ಅವಧಿಗೆ ಅಂದರೆ 31ನೇ ಜುಲೈ 2007ರವರೆಗೆ ಲೇಖಾನುದಾನವನ್ನು ಪಡೆಯಲಾಗಿದೆ. ದಿನಾಂಕ 20.2.2007ರಂದು ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು 2006–07ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯಮಾವಧಿ ಪರಿಶೀಲನೆ ವರದಿಯನ್ನು ಮಂಡಿಸಿದರು. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಕರ್ನಾಟಕ ಸರ್ಕಾರದ ದಿನಾಂಕ 31.3.2006ಕ್ಕೆ ಅಂತ್ಯಗೊಂಡ ವಾಣಿಜ್ಯ ವರದಿಯನ್ನು ಮಂಡಿಸಲಾಗಿದೆ. 2006–07ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಹಾಗೂ ಅಂತಿಮ ಕಂತು) ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಈ ಅಧಿವೇಶನದಲ್ಲಿ ನಿಯಮ 60ರ ಮೇರೆಗೆ ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿಯ ಬಗ್ಗೆ ಮತ್ತು ಬೆಂಗಳೂರು ಹಾಗೂ ರಾಜ್ಯದ ಇತರಡೆಗಳಲ್ಲಿ ಕೋಮು ಗಲಭೆಯಿಂದಾಗಿ ಉಂಟಾಗಿರುವ ತೊಂದರೆಯ ಬಗ್ಗೆ, ಕಾವೇರಿ ಜಲವಿವಾದ ನ್ಯಾಯಾಧೀಕರಣವು ನೀಡಿರುವ ಅಂತಿಮ ತೀರ್ಪಿನಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಅದಕ್ಕೆ ಪ್ರಾಸ್ತಾವಿಕವಾಗಿ ಚರ್ಚಿಸಲು ಅವಕಾಶ ನೀಡಿ ನಂತರ ನಿಯಮ 69ರ ಸೂಚನೆಯನ್ವಯ ಪರಿವರ್ತಿಸಿ, ಚರ್ಚೆಸಿ, ಉತ್ತರಿಸಲಾಗಿದೆ.

ನಿಯಮ 69 ರಡಿಯಲ್ಲಿ 19 ಅಲ್ಪಕಾಲಾವಧಿ ಸೂಚನೆಗಳನ್ನು ಸ್ವೀಕರಿಸಿ, ಅದಕ್ಕೆ ಪ್ರಾಸ್ತಾವಿಕವಾಗಿ ಚರ್ಚಿಸಲು ಅವಕಾಶ ನೀಡಿದೆ. ಈ ಅವಧಿಯಲ್ಲಿ 218 ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ ಹಾಗೂ 7 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. 141 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿದ್ದು, 133 ಸೂಚನೆಗಳನ್ನು ಅಂಗೀಕರಿಸಲಾಗಿದೆ, 10 ಸೂಚನೆಗಳನ್ನು ಪ್ರಶ್ನೆಯಾಗಿ ಅಂಗೀಕರಿಸಲಾಗಿದೆ, 8 ಸೂಚನೆಗಳು ತಿರಸ್ಕೃತವಾಗಿದೆ. 7 ಸೂಚನೆಗಳು ಸದನದಲ್ಲಿ ಚರ್ಚೆಗೆ ತೆಗೆದುಕೊಂಡು ಚರ್ಚೆಯಾಗಿರುತ್ತವೆ. 6 ವಿಷಯಗಳನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಸ್ವೀಕರಿಸಲಾಗಿದ್ದರೂ ಸದನದಲ್ಲಿ ಚರ್ಚೆಯಾಗಿರುವುದಿಲ್ಲ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 169ರ ಮೇರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಕಾಂಗ್ರೆಸ್ ಸದಸ್ಯರಿಂದ ನಿರ್ಣಯ ಸ್ವೀಕರಿಸಲಾಗಿ, 20.02.2007 ರಂದು ನಿರ್ಣಯವನ್ನು ಮಂಡಿಸಲು ಕೋರಲಾಗಿರುತ್ತದೆ. ಆದರೆ, ನಿರ್ಣಯವನ್ನು ಮಂಡಿಸಿರುವುದಿಲ್ಲ.

ಕರ್ನಾಟಕ ವಿಧಾನಸಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ, ಅಧೀನ ಶಾಸನ ರಚನಾ ಸಮಿತಿ, ಹಕ್ಕುಬಾಧ್ಯತೆಗಳ ಸಮಿತಿ, ಸರ್ಕಾರಿ ಭರವಸೆಗಳ ಸಮಿತಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ, ಅಂದಾಜುಗಳ ಸಮಿತಿಯ ವರದಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

ವಿಧಾನ ಮಂಡಲದ ಜಂಟಿ ಸದನ ಸಮಿತಿ (ಬೆಂಗಳೂರು ನಗರ/ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಕುರಿತು) ಮಧ್ಯಂತರ (ಭಾಗ-1) ವರದಿಯನ್ನು ಸದನಕ್ಕೆ ಒಪ್ಪಿಸಲಾಗಿದೆ.

ಈ ಅವಧಿಯಲ್ಲಿ ಒಟ್ಟು 2538 ಪ್ರಶ್ನೆಗಳನ್ನು ಸ್ವೀಕರಿಸಿದ್ದು, 2477 ಪ್ರಶ್ನೆಗಳನ್ನು ಅಂಗೀಕರಿಸಿದೆ ಹಾಗೂ 2194 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ನಿಯಮ 351ರಡಿಯಲ್ಲಿ 114 ಸೂಚನೆಗಳನ್ನು ಸ್ವೀಕರಿಸಿದ್ದು, 108 ಸೂಚನೆಗಳನ್ನು ಅಂಗೀಕರಿಸಿದೆ ಹಾಗೂ 76 ಸೂಚನೆಗಳಿಗೆ ಇಲಾಖೆಯಿಂದ ಉತ್ತರವನ್ನು ಸ್ವೀಕರಿಸಲಾಗಿದೆ.

ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು 20 ವಿಧೇಯಕಗಳನ್ನು ಅಂಗೀಕರಿಸಲಾಗಿದ್ದು, ವಿಧೇಯಕಗಳ ಮೇಲಿನ ಚರ್ಚೆಯಲ್ಲಿ ಮಾನ್ಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಉತ್ತಮ ಸಲಹೆಗಳನ್ನು ನೀಡಿರುತ್ತಾರೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸಹೊಡನೆ ಸಹಕರಿಸಿದ ಉಪ ಸಭಾಧ್ಯಕ್ಷರಿಗೆ, ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರುಗಳಿಗೆ, ಮುಖ್ಯವಾಗಿ ಗೃಹ, ಕಾನೂನು, ನ್ಯಾಯ ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿವಿಧ ಪಕ್ಷಗಳ ನಾಯಕರುಗಳಿಗೆ, ಎಲ್ಲಾ ಮಾನ್ಯ ಸದಸ್ಯರುಗಳಿಗೆ, ಸದನದ ಕಾರ್ಯಕಲಾಪಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಲು ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ, ಸರ್ಕಾರದ ವಿವಿಧ ಇಲಾಖಾ ಹಾಗೂ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

ಅಧ್ಯಕ್ಷರು :- ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೂ ಮುಂದೂಡಲಾಗಿದೆ.

(ಸದನ ಕಲಾಪವು ರಾತ್ರಿ 10 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಸದನವು ಅನಿರ್ದಿಷ್ಟ ಕಾಲ ಮುಂದೂಡಲ್ಪಟ್ಟಿತು)